your motives. I am telling you, if it is illegal, we will straight-away cancel it. I am prepared to do that. ವಿಷಯ ಗೊತ್ತಿಲ್ಲದೆ ಒಮ್ಮೆಲೇ ಎತ್ತಿಬಿಟ್ಟರೆ ಏನು?

ಶ್ರೀ ವಾಟಾಳ್ ನಾಗರಾಜ್ : ತಾವೇ ಇದನ್ನು ಖುದ್ದಾಗಿ ಪರಿಶೀಲನೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅಗತ್ಯ ಬಿದ್ದರೆ ಜಾಗ ಪರಿಶೀಲನೆ ಮಾಡೋಣ. ಅದೇನು ವಿಷಯ ಒಂದು ಅಂಶವೂ ಗೊತ್ತಿಲ್ಲದೆ ಸಡನ್ನಾಗಿ ನೀವು ಎತ್ತಿಬಿಟ್ಟರೆ ಉತ್ತರ ಹೇಗೆ ಕೊಡಬೇಕು? ದಯಮಾಡಿ ಅದನ್ನು ಕಳುಹಿಸಿಕೊಡಿ. ಸರಿಯಾದಂಥ ಉತ್ತರ ಕೊಡುತ್ತೇವೆ. .ಒಂದು ನಿರ್ಧಾರಕ್ಕೆ ಬರುತ್ತೇವೆ.

ಶ್ರೀ ಸಿ. ಬೈರೇಗೌಡ : ಪತ್ರವನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಕ್ರಮ ಕೈಗೊಳ್ಳಿ.

(2) ಅತಿವೃಷ್ಟಿಯಿಂದ ಬೆಳೆ ಹಾಳಾದವರಿಗೆ ಪರಿಹಾರ.

ಶ್ರೀ ಆರ್.ವಿ. ದೇಶಪಾಂಡೆ : ಒಂದು ನಿಮಿಷ. ಮಾನ್ಯ ಅಧ್ಯಕ್ಷರೇ, ಇವತ್ತು ಮುಂಜಾನೆ ಸಭಾಧ್ಯಕ್ಷರ ಛೇಂಬರ್‌ನಲ್ಲಿ ಒಂದು ವಿಷಯ ಚರ್ಚೆ ಮಾಡಿದೆವು. ನಿನ್ನೆ ನಾವು ವಾಕ್‌ಔಟ್ ಮಾಡಿದಾಗ ಮಾನ್ಯ ಕಂದಾಯ ಸಚಿವರು ಅತಿವೃಷ್ಟಿ ಬರಗಾಲದ ಬಗ್ಗೆ ಉತ್ತರ ಕೊಟ್ಟರು.

4.40 ಪಿ.ಎಂ

ಅಲ್ಲಿ ಕೆಲವು ವಿಚಾರಗಳಲ್ಲಿ ಒಂದು ಅಂಡರ್‌ಸ್ಟ್ಯಾಂಡಿಂಗ್ ಆಯಿತು. ಈ ದಿನ ಪ್ರಶ್ನೋತ್ತರ ವೇಳೆ ನಂತರ ನಾವು ಒಂದೆರಡು ವಿಚಾರವನ್ನು ಎತ್ತಿದರೆ ಅದಕ್ಕೆ ಕ್ಲಾರಿಫಿಕೇಷನ್ ಕೊಡುತ್ತೇವೆ ಎಂದು ಹೇಳಿದರು. ಮೊದಲನೆಯದಾಗಿ, ಹಾರ್ಟಿಕಲ್ಚರ್ ಕ್ರಾಪ್ಸ್ ಬಗ್ಗೆ ಒಂದು ಆದೇಶವನ್ನು ಹೊರಡಿಸುತ್ತೇವೆ ಎಂದು ಹೇಳಿದರು. ಅದರ ಬಗ್ಗೆ ಹೇಳಬೇಕು. ಎರಡನೆಯದಾಗಿ, ಈಗಾಗಲೇ ಪ್ರತಿಯೊಬ್ಬ ಜಿಲ್ಲಾಧಿಕಾರಿಗಳಿಗೆ 1 ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಲು ಅಧಿಕಾರ ಕೊಡುತ್ತೇವೆ ಎಂದು ಹೇಳಿದರು. ಅದರ ಬಗ್ಗೆ ಆದೇಶ ಹೊರಡಿಸುತ್ತೇವೆ ಎಂದು ಹೇಳಿದ್ದಾರೆ. ಮೂರನೆಯದಾಗಿ, ಇವತ್ತು ಸರ್ಕಾರಿ ಆದೇಶದ ಪ್ರಕಾರ ರೈತರಿಗೆ ಪರಿಹಾರ ಸಿಗಬೇಕಾದರೆ ಶೇಕಡಾ 75ರಷ್ಟು ಬೆಳೆ ಹಾಳು ಆಗಿರಬೇಕು. ಇದರಿಂದಾಗಿ ಯಾರಿಗೂ ಪರಿಹಾರ ಸಿಗುತ್ತಿಲ್ಲ. ಒಬ್ಬ 4 ಎಕರೆಯಲ್ಲಿ 2 ಎಕರೆ ಭತ್ತ ಬೆಳೆದು, 2 ಎಕರೆಯಲ್ಲಿ ಹತ್ತಿ ಸಂಪೂರ್ಣ ವಿಫಲ ಆದರೂ ಸಹ ಆತನಿಗೆ ಈ ನಿಯಮದ ಪ್ರಕಾರ ಸಿಗುವುದಿಲ್ಲ. ಆದ್ದರಿಂದ ಎಕರ್‌ವೈಸ್ ಮಾಡದೇ, ಯಾವ ಬೆಳೆ ಹಾಳಾಗುತ್ತದೆ ಅದಕ್ಕೆ ಪರಿಹಾರ ಸಿಗುವ ಹಾಗೆ ಆಗಬೇಕು.

ಉಪಾಧ್ಯಕ್ಷರು : ನಿನ್ನೆ ನೆರೆ ಹಾವಳಿ ಬಗ್ಗೆ ಚರ್ಚೆ ಮುಕ್ತಾಯ ಮಾಡಿದ್ದೇವೆ. ಮೊದಲು ಕಾರ್ಯಕಲಾಪದ ಪಟ್ಟಿಯಲ್ಲಿರುವ ವಿಷಯಗಳನ್ನು ಮುಗಿಸೋಣ. ಆ ನಂತರ ಅವಕಾಶ ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮುಂಜಾನೆ ಈ ಬಗ್ಗೆ ಅಂಡರ್‌ಸ್ಟ್ಯಾಂಡಿಂಗ್ ಆಗಿದೆ. ಅದಕ್ಕಾಗಿ ಎತ್ತಿದ್ದೇನೆ. ಆ ಸಭೆಯಲ್ಲಿ ವಿರೋಧಪಕ್ಷದ ಎಲ್ಲಾ ಸದಸ್ಯರು ಇದ್ದರು. ಮುಖ್ಯಮಂತ್ರಿಗಳ ಜೊತೆ ಮಾತನಾಡಿದಾಗ, ಪುನಃ ಚರ್ಚೆ ಬೇಡ ಪ್ರಶ್ನೋತ್ತರ ಆಗ ತಕ್ಷಣ ವಿಷಯ ರೈಸ್ ಮಾಡಿ ಕಂದಾಯ ಸಚಿವರು ಉತ್ತರ ಕೊಡುತ್ತಾರೆ ಎಂದು ಹೇಳಿದರು. ಮತ್ತೆ ರೈತರಿಗೆ ಬಡ್ಡಿ ಮನ್ನಾ ಮಾಡಬೇಕು ಎಂದು ಹೇಳಿದ್ದೆವು.

ಉಪಾಧ್ಯಕ್ಷರು : ಸಭಾಧ್ಯಕ್ಷರ ಕೊಠಡಿಯಲ್ಲಿ ನಡೆದ ಮಾತುಕತೆ ಪ್ರಕಾರ ಇಲ್ಲಿ ಕಾಲಾವಕಾಶ ಕೊಡಿ ಎಂದು ಕೇಳುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಪ್ರಶ್ನೋತ್ತರ ಆದಮೇಲೆ ವಿಚಾರ ಪ್ರಸ್ತಾಪ ಮಾಡಿ ಎಂದಿದ್ದರಿಂದ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಾವು ಇದರ ಬಗ್ಗೆ ಮಾತನ್ನೇ ಆಡಲಿಲ್ಲ. ತಮಗೆ ಹೇಳುವುದಾದರೆ, ನಮ್ಮನ್ನು ಹೊರಗೆ ಕೂರಿಸಿ...

ಉಪಾಧ್ಯಕ್ಷರು : ಈ ವಿಷಯದಲ್ಲಿ ಚರ್ಚೆ ಆದಾಗ ನಾನೇ ತಮ್ಮನ್ನು ಕರೆದೆ. ನಾನು ಕರೆದಾಗ ತಾವು ಹೊರಗಡೆ ಹೋಗಿದ್ದಿರಿ ಎಂದು ಕಾಣುತ್ತದೆ. ವಾಕೌಟ್ ಆದಾಗ ಇದು ಆಗಿದ್ದು ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಗೊತ್ತಿದೆ, ಈಗ ನಿನ್ನೆ ಬೆಂಗಳೂರು ನಗರಕ್ಕೆ ಪ್ರಧಾನಮಂತ್ರಿಗಳು ದಯಮಾಡಿಸಿದ್ದರು...

ಶ್ರೀ ಕರಿಯಣ್ಣ : ಕಾರ್ಯಕ್ರಮದ ಪಟ್ಟಿ ಪ್ರಕಾರ ಚರ್ಚೆ ಆಗಬೇಕು.

ಉಪಾಧ್ಯಕ್ಷರು : ಸಭಾಧ್ಯಕ್ಷರ ಕೊಠಡಿಯಲ್ಲಿ ಚರ್ಚೆ ಆದ ಪ್ರಕಾರ ಅವರು ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕರಿಯಣ್ಣ : ಈ ರೀತಿ ಚರ್ಚೆಗಳು ಆದರೆ ಹೇಗೆ?

ಶ್ರೀ ಧರ್ಮಸಿಂಗ್ : ಸಭಾಪತಿಯವರ ಮುಂದೆ ಒಪ್ಪಿಕೊಂಡಿದ್ದೇವೆ. ನಾವೂ ಉತ್ತರ ಕೊಡುವವರಿದ್ದೇವೆ. ಮುಖ್ಯಮಂತ್ರಿಗಳೂ ಕೂಡ ಈ ಸಂದರ್ಭದಲ್ಲಿ ಇದ್ದಾರೆ. ಪಾಲಿಸಿ ಡಿಸಿಷನ್ ಇದು ಇದೆ. ನಾವು ಡೆಫನೆಟ್‌ಲಿ ಅದನ್ನು ಅನೌನ್ಸ್ ಮಾಡುತ್ತೇವೆ.

(3) ನೆರೆಹಾವಳಿ ಬಗ್ಗೆ ಪ್ರಧಾನಮಂತ್ರಿಗಳಿಂದ ನೆರವನ್ನು ಕೋರಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಿನ್ನೆ ಬೆಂಗಳೂರು ನಗರಕ್ಕೆ ಮಾನ್ಯ ಪ್ರಧಾನಮಂತ್ರಿಗಳು ದಯಮಾಡಿಸಿದ್ದರು. ಆಗ ನೆರೆ ಹಾವಳಿ ಬಗ್ಗೆ ನಮ್ಮ ಸರ್ಕಾರ ಮತ್ತೊಂದು ಮನವಿಯನ್ನು ಏನಾದರೂ ಕೊಟ್ಟಿದೆಯೇ? ಮತ್ತು ಕೇಂದ್ರ ಸರ್ಕಾರ ಇವರಿಗೆ ಕೊಟ್ಟಿರತಕ್ಕ ಭರವಸೆ ಏನು? ಇವರು ಈಗ 100 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಕಳುಹಿಸಿದ್ದಾರೆ. ಅದರ ಬಗ್ಗೆ ಏನು ಉತ್ತರ ಬಂದಿದೆ? ನಿನ್ನೆ ಮಾನ್ಯ ಪ್ರಧಾನಮಂತ್ರಿಗಳು ಏನಾದರೂ ಸ್ಪಷ್ಟವಾದ ಭರವಸೆಯನ್ನು ಬೆಂಗಳೂರಿನಲ್ಲಿ ನೀಡಿದ್ದಾರೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ವಾಟಾಳ್ ನಾಗರಾಜ್ ಅವರು ತಮ್ಮೆಲ್ಲರ ಅಭಿಪ್ರಾಯವನ್ನು ಪ್ರತಿನಿಧಿಕರಿಸಿದ್ದಾರೆ. ಇದರಲ್ಲಿ ಪುನಃ ಚರ್ಚೆ ಆರಂಭ ಆಗುವುದು ಬೇಡ. ಇದನ್ನು ಇಷ್ಟಕ್ಕೆ ಮುಗಿಸೋಣ. ಈಗ ಒಂದೊಂದು ಕೋಟಿ ರೂಪಾಯಿ ಒಂದೊಂದು ಜಿಲ್ಲೆಗೆ ಪ್ರವಾಹದಲ್ಲಿ ಖರ್ಚು ಮಾಡಬಹುದೆಂದು ಹೇಳಿ ನಾವು ಈಗಾಗಲೇ ತಿಳಿಸಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನೂ ಹೇಳುವುದು ಎರಡು ವಿಚಾರಗಳು ಇವೆ. ನಾನು ನಿನ್ನೆ ಗಮನಸೆಳೆವ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಿದ್ದಾಗ ಬರಗಾಲದ ಬಗ್ಗೆ ಚರ್ಚೆಯಲ್ಲಿ ಪ್ರಸ್ತಾಪ ಮಾಡಿ ಎಂದರು. ಆಗ ನಾನು ಸುಮ್ಮನೆ ಕುಳಿತೆ. ಈಗ ಚರ್ಚೆಗೆ ಅವಕಾಶ ಇಲ್ಲ ಎಂದರೆ ಹೇಗೆ?

ಶ್ರೀ ಎಂ. ವೀರಪ್ಪ ಮೊಯಿಲಿ : ನಿನ್ನೆ ಅವರು ಬಾಯ್‌ಕಾಟ್ ಮಾಡಿದ್ದುದು ಏಕೆ? ಬಾಯ್‌ಕಾಟ್ ಮಾಡಿದ ಮೇಲೆ ಪುನಃ ರೀಓಪನ್ ಮಾಡತಕ್ಕ ಪ್ರವೃತ್ತಿ ಇಲ್ಲಿ ಇಲ್ಲವೇ ಇಲ್ಲ. ಬಾಯ್‌ಕಾಟ್ ಮಾಡದೇ ಇಲ್ಲೇ ಕುಳಿತುಕೊಳ್ಳಬೇಕಾಗಿತ್ತು.